ಅ) ಬೆಂಗಳೂರು ನಗರದಲ್ಲಿ ಕೆಲವೊಂದು ಮಾರ್ಗಗಳನ್ನು ಖಾಸಗೀಕರಣಗೊಳಿಸುವ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ಆದರ ವಿವರಗಳನ್ನು ಪೂರೈಸಿ?

ಇ) ಇಲ್ಲದಿದ್ದಲ್ಲಿ ಪ್ರಯಾಣಿಕರಿಗೆ ಉತ್ತಮ ಸೇವೆ ಸಲ್ಲಿಸುವ ಸಲುವಾಗಿ ಸರ್ಕಾರ ಕೈಗೊಂಡ ಕ್ರಮಗಳು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಳೂರು ನಗರ ಸಾರಿಗೆ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ನಗರದಲ್ಲಿ ಬಿ.ಟಿ.ಎಸ್. ಕೆಲವು ರೋಡುಗಳನ್ನು ಖಾಸಗೀಕರಣ ಮಾಡುತ್ತೀರಾ ಎಂದು ಕೇಳಿದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಖಾಸಗೀಕರಣ ಮಾಡುತ್ತಾರೋ ಅಥವಾ ಅವರೇ ಓಡಿಸುತ್ತಾರೋ ಅದು ಸರ್ಕಾರಕ್ಕೆ ಬಿಟ್ಟಿದ್ದು. ಆದರೆ ಬೆಂಗಳೂರು ನಗರದ ನಾಗರೀಕರಿಗೆ ಬಸ್ ವ್ಯವಸ್ಥೆ ಮಾಡಿಕೊಡುವುದು ಸರ್ಕಾರದ್ದು. ಈಗಿರತಕ್ಕ ವ್ಯವಸ್ಥೆಯಲ್ಲಿ ಕಚೇರಿ ವೇಳೆಯಲ್ಲಿ ಮತ್ತು ಶಾಲಾ ವೇಳೆಯಲ್ಲಿ ಬಸ್ಸಿನ ಫುಟ್‌ಬೋರ್ಡಿನ ಮೇಲೂ ನಿಲ್ಲುವುದಕ್ಕೆ ಅವಕಾಶ ಇಲ್ಲ. ಇದು ನಗರದ ಮಧ್ಯದಲ್ಲಿ ಹೊರಗಡೆ, ಅಂದರೆ, ಜೆ.ಪಿ.ನಗರ ಮುಂತಾದ ಕಡೆಗಳಲ್ಲಿ 1 ಕಿಲೋಮೀಟರ್, 2 ಕಿಲೋಮೀಟರ್ ಬಸ್‌ಸ್ಟಾಪಿಗೆ ನಡೆದುಕೊಂಡು ಬಂದು ಬಸ್ ಹತ್ತತಕ್ಕಂಥ ಪರಿಸ್ಥಿತಿ ಇದೆ. ಬಿ.ಟಿ.ಎಸ್. ಮೂಲಕ ಒಳ್ಳೆಯ ಸೌಲಭ್ಯ ಕೊಡಿ, ಇಲ್ಲದೇ ಖಾಸಗೀಕರಣ ಮಾಡಿ. ಆದರೆ ಖಾಸಗೀಕರಣ ಮಾಡುವುದಿಲ್ಲವೆಂದು ಹೇಳಿದ್ದಾರೆ. ವಿಮಾನ ಸೌಲಭ್ಯವನ್ನು ಖಾಸಗೀಯವರಿಗೆ ಕೊಟ್ಟಿದ್ದಾರೆ. ತಾವು ಏಕೆ ಖಾಸಗೀಕರಣ ಮಾಡಬಾರದು, ಇದರಿಂದ ಜನರಿಗೆ ಅನುಕೂಲವಾಗುವುದಿಲ್ಲವೇ?

ಶ್ರೀ ಭೀಮಣ್ಣ ಖಂಡ್ರೆ : ಖಾಸಗೀಕರಣ ಮಾಡುವುದಕ್ಕೆ ಸಾಧ್ಯವಿಲ್ಲ. ತಾವು ಸೌಲಭ್ಯಗಳನ್ನು ಕೇಳಿದ್ದೀರಿ. ಮತ್ತು ಮನವಿ ಕೊಟ್ಟಿದ್ದೀರಿ. ನಾನು ಮುಖ್ಯಮಂತ್ರಿಗಳನ್ನು ಕೇಳಿದ್ದೇನೆ, ಸೌಲಭ್ಯ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ರಾಮಲಿಂಗರೆಡ್ಡಿ : ಹಾಲಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಶಾಲಾ ಮಕ್ಕಳಿಗೆ ಅನಾನುಕೂಲವಾಗಿದೆ. ಅದರಲ್ಲೂ ಹೊರವಲಯಗಳಲ್ಲಿ ತೊಂದರೆಯಾಗುತ್ತಿದೆ.

ಉಪಾಧ್ಯಕ್ಷರು : ಕನ್ಸಿಡರ್ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಚಿಲ್ಲರೆ ಸೀಮೆ ಎಣ್ಣೆ ಮಾರಾಟಗಾರದಿಂದ ಸೀಮೆಎಣ್ಣೆಯ ಕದಿಮೆ ಆಳತೆ

15 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರದಲ್ಲಿ ಚಿಲ್ಲರೆ ಸೀಮೆಎಣ್ಣೆ ಮಾರಾಟಗಾರರು ಬಳಕೆದಾರರಿಗೆ ಕಡಿಮೆ ಆಳತೆಯಲ್ಲಿ ಸೀಮೆಎಣ್ಣೆ ನೀಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಎಷ್ಟು ಪರವಾನಗಿಗಳನ್ನು ಅಮಾನತ್ತುಗೊಳಿಸಲಾಗಿದೆ? ಹಾಗೂ ಎಷ್ಟು ಪರವಾನಗಿಗಳನ್ನು ರದ್ದು ಗೊಳಿಸಲಾಗಿದೆ?

ಇ) ನಗರದಲ್ಲಿ ನಾಗರೀಕರಿಗೆ ಸೂಕ್ತ ರೀತಿಯಲ್ಲಿ ಆಳತೆ ಮಾಡಿ ಸೀಮೆಎಣ್ಣೆ ಸರಬರಾಜು ಮಾಡಲು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀಮತಿ ಮನೋರಮ ಮದ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜ ಸಚಿವರು) :

ಅ) ಹಲವು ಪ್ರಕರಣಗಳಲ್ಲಿ ಬಂದಿದೆ.

ಆ) ಕರ್ತವ್ಯ ಲೋಪ ಮಾಡುವ ಲೈಸೆನ್ಸ್‌ದಾರರ ವಿರುದ್ಧ ಕ್ರಮ ಕೈಗೊಂಡು ದಿನಾಂಕ 1-4-92ರಿಂದ 30-11-92ರವರೆಗೆ 81ಪರವಾನಗಿಗಳನ್ನು ಅಮಾನತ್ತುಗೊಳಿಸಿದ್ದು, ಒಂದು ಪರವಾನಗಿಯನ್ನು ರದ್ದುಪಡಿಸಿದೆ.

ಇ) ನಾಗರೀಕರಿಗೆ ಸೂಕ್ತ ರೀತಿಯಲ್ಲಿ ಸೀಮೆಎಣ್ಣೆ ವಿತರಿಸುವ ಬಗ್ಗೆ ಲೈಸನ್ಸ್‌ದಾರರಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿ ಸೀಮೆಎಣ್ಣೆಯನ್ನು ಬ್ಯಾರಲ್‌ನಿಂದ ನೇರವಾಗಿ ಆಳತೆ ಮಾಡದೇ ಬಕೆಟ್‌ಗಳಲ್ಲಿ ತುಂಬಿಸಿ ನಂತರ ಸರಿಯಾಗಿ ಆಳತೆ ಮಾಡಿ ನೀಡಲು ಆದೇಶ ನೀಡಲಾಗಿದೆ. ತಪ್ಪಿತಸ್ಥರ ವಿರುದ್ಧ ತೀವ್ರ ಕ್ರಮ ಕೈಗೊಳ್ಳಲು ಅಧಿಕಾರಿಗಳು ತಪಾಸಣೆ ನಡೆಸುತ್ತಿದ್ದಾರೆ.

ಶ್ರೀ ಕೆ. ಲಕ್ಷ್ಮಣ್ಣ : ಮಾನ್ಯ ಉಪಾಧ್ಯಕ್ಷರೇ, ಸೀಮೆಎಣ್ಣೆ ಕೊಡತಕ್ಕ ಪರವಾನಗಿ ಇರತಕ್ಕವರು, ಬಳಕೆದಾರರಿಗೆ ಆಳತೆಯಲ್ಲಿ ಕಡಿಮೆ ಎಣ್ಣೆಯನ್ನು ಕೊಡುತ್ತಿದ್ದಾರೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಬ್ಯಾರೆಲ್‌ಗಳಿಂದ ಬೇರೆ ಡಬ್ಬಗಳಿಗೆ ಸುರಿದುಕೊಂಡು, ನಂತರ, ಆಳತೆ ಮಾಡಿಕೊಡಬೇಕೆಂದು ಇದ್ದರೂ ಕೂಡ, ಯಾರೂ ಈ ಕೆಲಸ ಮಾಡುತ್ತಾ ಇಲ್ಲ. ನೇರವಾಗಿ ಬ್ಯಾರೆಲ್‌ನಿಂದಲೇ ಆಳತೆ ಮಾಡುತ್ತಿದ್ದಾರೆ. ಇವತ್ತಿನದಿವಸ 1 ಲೀಟರಿಗೆ ಮುಕ್ಕಾಲು ಲೀಟರು ಕೊಡುತ್ತಿದ್ದಾರೆ. ಇದರಿಂದ ಬಡವರಿಗೆ ಮತ್ತು ಮಧ್ಯಮವರ್ಗದವರಿಗೆ ಅನ್ಯಾಯವಾಗುತ್ತಿದೆ.

ಯಾವ ಅಧಿಕಾರಿಗಳೂ ಕೂಡಾ ತನಿಖೆ ಮಾಡುತ್ತಿಲ್ಲ. ಜಾಯಿಂಗ್ ಡೈರೆಕ್ಟರಾಗಲೀ, ಡೈರೆಕ್ಟರಾಗಲೀ ಇದನ್ನು ಇನ್ಸ್‌ಪೆಕ್ಷನ್ ಮಾಡಿದ್ದಾರೆಯೇ? ಆ ದೃಷ್ಟಿಯಿಂದಲೇ ಅವರನ್ನು ಅಮಾನತ್ತು ಮಾಡಬೇಕೆಂದು ಹೇಳುವುದು ತಮ್ಮ ಉತ್ತರದ ಪ್ರಕಾರ ಒಂದು ಪರವಾನಗಿಯನ್ನು ಮಾತ್ರ ರದ್ದುಪಡಿಸಲಾಗಿದೆ. ಇನ್ನು 81 ಪ್ರಕರಣಗಳು ಎಸ್ಕ್ವಯರಿಯಲ್ಲಿ ಇವೆ, ಸರಿಯಾದ ಆಳತೆ ಕೊಡುವುದಕ್ಕೆ ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ?

ಶ್ರೀಮತಿ ಮನೋರಮ ಮದ್ವರಾಜ್ : ನಾನು ಉತ್ತರದಲ್ಲಿ ಕೊಟ್ಟಿರುವ ಹಾಗೆ ಪತ್ರಿಕೆಗಳಲ್ಲಿ ನಾನು ಪದೇ ಪದೇ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಈ ರೀತಿ ಸೀಮೆಎಣ್ಣೆ ಆಳತೆ ಕಡಿಮೆಯಾದರೆ ಖಂಡಿತ ಸ್ಟ್ರಿಕ್ಟ್ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ಆದರೂ ಇಂತಹ ನಿರ್ದಿಷ್ಟ ಕೇಸ್‌ಗಳು

ಇದ್ದರ ಹೇಳಿ ತಕ್ಷಣ ಆಕ್ಷನ್ ತೆಗೆದುಕೊಳ್ಳುತ್ತೇವೆ. ಅಧಿಕಾರಿಗಳ ಮೇಲೂ ತಪ್ಪು ಕಂಡುಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪೆರಿಕಲ್ ಮಲ್ಲಪ್ಪ : ಸೀಮೆಎಣ್ಣೆ ಮಾರುವವರು ಯಾವ ರೀತಿ ಮೋಸ ಮಾಡುತ್ತಾರೆಂದರೆ, ಅವರು ಡಬ್ಬಕ್ಕೆ ಅಳವಸಿಕೊಂಡಿರುವ ಕೊಳಾಯಿಗಳು ಬಹಳ ಚಿಕ್ಕವು ಇದ್ದು ಅರ್ಧ ಅಡಿ ಸೋಪನ್ನು ಅಂಟಿಸಿದ್ದು ಎಣ್ಣೆ ಕೆಳಗೆ ಬೀಳುವಾಗ ಹೆಚ್ಚು ಸೊರೆ ಬಂದು ಕಾಲು ಲೀಟರ್ ಸೀಮೆಎಣ್ಣೆ ಅದರಲ್ಲಿ ಕಡಿಮೆ ಇರುತ್ತದೆ. ಕೊಳಚಿಪ್ರದೇಶಗಳಲ್ಲಂತೂ ಒಂದು ಲೀಟರ್‌ಗೆ ಬದಲು ಅರ್ಧ ಲೀಟರ್ ಸೀಮೆಎಣ್ಣೆ ವಿತರಣೆ ಮಾಡುತ್ತಿದ್ದಾರೆ. ಇಲ್ಲಿ 81ಜನರ ಪರವಾನಿಗೆ ಅಮಾನತ್ತು ಮಾಡಿರುವುದಾಗಿ ಹೇಳುತ್ತೀರಿ. ತಾವು ಈ ಬಗ್ಗೆ ಎಷ್ಟು ಜನರನ್ನು ಸಸ್ಪೆಂಡ್ ಮಾಡಿದ್ದೀರಿ? ತಾವ ಒಂದಷ್ಟು ಜನರನ್ನು ಸಸ್ಪೆಂಡ್ ಮಾಡಬೇಕು. ಇಲಾಖೆಯಲ್ಲಿ ತಾವು ನೋಟೀಸ್ ಕೊಡುತ್ತೀರಿ. ಸಸ್ಪೆಂಡ್ ಆದವರು ಸ್ವಲ್ಪ ದಿನಗಳ ನಂತರ ರೀಇನ್‌ಸ್ಟೇಟ್ ಆಗಿ ಮತ್ತೆ ಅವರಿಗೇ ಲೈಸೆನ್ಸ್ ಕೊಡುತ್ತಾರೆ. ಆದ್ದರಿಂದ ಅಮಾನತ್ತು ಗೊಳಿಸಿದವರಿಗೆ ಮತ್ತೆ ಲೈಸೆನ್ಸ್ ಕೊಡದೇ ಬೇರೆಯವರಿಗೆ ಲೈಸೆನ್ಸ್ ಕೊಡುವ ವ್ಯವಸ್ಥೆ ಆಗುವವರೆಗೂ ಇದು ಹೀಗಿಯೇ ನಡೆದುಕೊಂಡು ಹೋಗುತ್ತದೆ.

ಶ್ರೀಮತಿ ಮನೋರಮ ಮಧ್ವರಾಜ್ : ನಾನು ಈಗಾಗಲೇ ಸುತ್ತೋಲೆಯನ್ನು ಕಳುಹಿಸಿದ್ದೇನೆ. ಸೀಮೆಎಣ್ಣೆಯನ್ನು ಬಕೆಟ್‌ಗೆ ಬಿಟ್ಟು ಆ ನಂತರ ಅಳತೆ ಮಾಡಿ ಕೊಡಬೇಕೆಂದು ತಿಳಿಸಿದ್ದೇವೆ. ಸಸ್ಪೆಂಡ್ ಮಾಡುವುದರಲ್ಲಿ ದಯೆ ದಾಕ್ಷಣ್ಯ ಎಂಬುದು ಇಲ್ಲ. ನಿರ್ದಿಷ್ಟ ದೂರುಗಳನ್ನು ತನ್ನಿ. ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ಕೆ. ಲಕ್ಕಣ್ಣ : ಏನು ಕಡಿಮೆ ಸೀಮೆಎಣ್ಣೆ ಕೊಡುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಬದಲು ಇನ್ಸ್‌ಪೆಕ್ಟರ್ಸ್, ಡೆಪ್ಯುಟಿ ಡೈರೆಕ್ಟರುಗಳನ್ನು ತಾವು ಸಸ್ಪೆಂಡ್ ಮಾಡುತ್ತಾ ಹೋದರೆ ಅವರಿಗೂ ಭಯಬರುತ್ತದೆ. ಇದಕ್ಕೆಲ್ಲಾ ಅವರೇ ಜವಾಬ್ದಾರಿ ಹೊರಬೇಕಾಗುತ್ತದೆ. ಮಾರುವವರಿಗೆ ಶಿಕ್ಷೆ ಕೊಡುವ ಬದಲು ಇನ್ಸ್‌ಪೆಕ್ಟರ್, ಡೆಪ್ಯುಟಿ ಡೈರೆಕ್ಟರ್ ಮೇಲೆ ತಾವು ಕಾರ್ಯಕ್ರಮ ಹಾಕಿಕೊಳ್ಳಿ?

ಶ್ರೀಮತಿ ಮನೋರಮ ಮಧ್ವರಾಜ್ : ತಪ್ಪಿತಸ್ಥರು ಎಂದು ಕಂಡುಬರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ನಾವು ಹಿಂಜರಿಯುವುದಿಲ್ಲ ಅಂತಹವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ರಾಜ್ಯದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಟಾಪ್‌ಗಳ ಮೇಲೆ ಜನರ ಸಂಚಾರ

1002 - ಶ್ರೀ ಆರ್.ಎನ್. ನಾಯಕ್ (ಭಟ್ಕಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಮೇಲೆ ಕುಳಿತು ಜನರು ಸಂಚರಿಸುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಯಾವ ಜಿಲ್ಲೆಗಳಲ್ಲಿ ಅಂತಹ ಪ್ರಕರಣಗಳನ್ನು ಗುರುತಿಸಲಾಗಿದೆ?

ಇ) ಬೀದರ್ ಜಿಲ್ಲೆಯಲ್ಲಿ ಅಂತಹ ಎಷ್ಟು ಪ್ರಕರಣಗಳನ್ನು ಪೋಲೀಸರು ದಾಖಲಿಸಿಕೊಂಡಿರುವರು?